ಹಾಗೆ ಇದ್ದ ಜನ ಹೀಗೇಕೆ ಆದರು?

ಅವಲೋಕನ

ಡಾ.ಆರ್.ಜಿ.ಹೆಗಡೆ

ramhegde62@gmail.com

ಭಾರತೀಯನಾಗಿ ತಾನು ಸಾಂಸ್ಕೃತಿಕ ಮರುಹುಟ್ಟು ಪಡೆದ ಕಥನವನ್ನು ಗಾಂಧಿ ಹಿಂದ್ ಸ್ವರಾಜ್‌ನಲ್ಲಿ ಮತ್ತು 'ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿಥ್ ಟ್ರೂತ್‌ನಲ್ಲಿ ಹೇಳಿಕೊಳ್ಳುತ್ತಾರೆ. ತಾರುಣ್ಯದಲ್ಲಿ ಗಾಂಧಿ ಬ್ರಿಟಿಷ್ ಜೀವನ ವಿಧಾನವನ್ನೇ ಆರಾಧಿಸಿದ್ದರು.

ಭಾರತೀಯತೆಗೆ 'ಅನ್ಯ'ರಾಗುವ ಮಾನಸಿಕ ಸ್ಥಿತಿಯಲ್ಲಿದ್ದರು. ಮತ್ತೆ ಅವರಿಗೆ ನಮ್ಮ ಸಂಸ್ಕೃತಿಯ ಅನನ್ಯತೆಯ ಅರಿವಾಗಿದ್ದು ತಾವು ಬ್ಯಾರಿಸ್ಟರಾಗಲು ಇಂಗ್ಲೆಂಡಿಗೆ ಹೋಗಿ ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಮುಖಾಮುಖಿಯಾದಾಗಲೇ. ಈ ಸಂಸ್ಕೃತಿ ಆ ಯುಟಿಲಿಟೇರಿಯನ್ ಸಂಸ್ಕೃತಿಗಿಂತ ಭಿನ್ನವಾಗಿ ನಿಂತು ನೈತಿಕತೆ ಮತ್ತು ಪಾರಮಾರ್ಥಿಕತೆಗೆ ನೀಡಿದ್ದ ಪ್ರಾಮುಖ್ಯತೆಯ ಅರಿವುಂಟಾಗಿದ್ದು ಅಲ್ಲಿಯೇ. ಧರ್ಮಗಳನ್ನು ನಮ್ಮ ಸಂಸ್ಕೃತಿ ಬಳಸಿಕೊಂಡು, ಕಾಪಾಡಿಕೊಂಡು ಬಂದಿದ್ದು ಇದೇ ಉದ್ದೇಶಕ್ಕಾಗಿಯೇ ಎಂಬ ತಿಳಿವು ಮೂಡಿದ್ದು ಮತ್ತು ಇಂಥ ಸಂಸ್ಕೃತಿಯಿಂದ 'ಹೊರಗಾಗುವ' ವ್ಯಕ್ತಿ ತನ್ನ ನೈತಿಕ ಪ್ರಜ್ಞೆ, ಘನತೆ, ಶಕ್ತಿ, ಗೌರವ ಕಳೆದುಕೊಂಡು ನಿಲ್ಲುವ ಎಚ್ಚರ ಮೂಡಿದ್ದು. ಇಂಥ ದರ್ಶನದ ನಂತರವೇ ಗಾಂಧಿ ತಮ್ಮನ್ನು ತಾವು ಸನಾತನಿ ಹಿಂದು ಎಂದು ಕರೆದುಕೊಂಡು ತಮ್ಮ ವ್ಯಕ್ತಿತ್ವವನ್ನು, ಚಳವಳಿಯನ್ನು ದೇಸಿ, ಧಾರ್ಮಿಕ, ನೈತಿಕ ಹಂದರಗಳ ಮೇಲೆ ನಿಲ್ಲಿಸಿದ್ದು.

ಗಾಂಧಿ ಚಳವಳಿಯ ಉದ್ದೇಶ ಸ್ವಾತಂತ್ರ್ಯ ಪಡೆಯುವುದರ ಜತೆಗೆ ಒಂದು ಆದರ್ಶ ಸಮಾಜವನ್ನು, 'ರಾಮ ರಾಜ್ಯವನ್ನು' (ನೈತಿಕತೆಯನ್ನು ಪ್ರಧಾನವಾಗಿ ಹೊಂದಿದ ದೇಶ) ಕಟ್ಟುವುದು ಇತ್ತು. ಸಮಾಜದ ಒಳಗಿದ್ದ ಅಸಮಾನತೆಗಳನ್ನು ಓಡಿಸಿ, ಜನರನ್ನೆಲ್ಲ ವಿಭಿನ್ನತೆಯಲ್ಲಿಯೇ ಒಂದು ಐಕ್ಯತೆಯಲ್ಲಿ ಸಂಘಟಿಸುವುದು ಇತ್ತು. ಇಂಥ ಉದ್ದೇಶವನ್ನು ಸಾಧಿಸಲು ಗಾಂಧಿ ಬಳಸಿಕೊಂಡಿದ್ದು ನಮ್ಮ ಅಸಂಖ್ಯ ಧರ್ಮ, ಜಾತಿಗಳೊಳಗೆ ಸಮಾನ ಅಂಶವಾಗಿ ಬೇರುಬಿಟ್ಟಿದ್ದ ನೈತಿಕ ಶಕ್ತಿಯನ್ನು. ಮತ್ತೆ ಅವುಗಳಲ್ಲಿನ ವಿಕೃತಿಗಳು, ದೋಷಗಳು ಮತ್ತು ಅಮಾನವೀಯತೆಗಳ ಪರಿಚಯವೂ ಗಾಂಧಿಗೆ ಇತ್ತು. ಗೊಡ್ಡು ಸಂಪ್ರದಾಯಗಳ ವಿರುದ್ಧ ಸಮರ ಸಾರಿದವರು ಅವರು. ಢಾಂಬಿಕ ಧಾರ್ಮಿಕತೆ, ದುಷ್ಟ ಜಾತೀಯತೆ ವಿರುದ್ಧ ಸಾಯುವವರೆಗೂ ಹೋರಾಡಿದವರು.

ಆದರೂ ಈ ಧರ್ಮ, ಜಾತಿ ವ್ಯವಸ್ಥೆಗಳಿಗೆ ಜನರಿಗೆ ನೈತಿಕ ಸಂಕೋಲೆ ಹಾಕುವ ಶಕ್ತಿ ಇದೆ ಎನ್ನುವುದನ್ನು ಗಾಂಧಿ ಗ್ರಹಿಸಿದ್ದರು. ಅಂದರೆ ಉದಾಹರಣೆ, ನಮ್ಮವರು ಅಂಥ (ಕೆಟ್ಟ) ಕೆಲಸ ಮಾಡುವುದಿಲ್ಲ, ಮಾಡಬಾರದು ಎನ್ನುವ ಭಾವನೆ ಅಂದಿನ ಜನರ ಮನಸ್ಸನ್ನು ಕಟ್ಟಿಹಾಕಿತ್ತು. ವ್ಯವಸ್ಥೆ ಅಷ್ಟರ ಮಟ್ಟಿಗೆ ಒಳ್ಳೆಯದು ಎನ್ನುವ ಅರಿವು ಬಹುಶಃ ಗಾಂಧಿ ಅವರಿಗಿತ್ತು. ಆಂತರಿಕವಾಗಿ ತಿದ್ದಬೇಕು. ಮುರಿದುಹಾಕಿದರೆ 'ಅನೈತಿಕತೆ'ಯನ್ನು ಹತೋಟಿಯಲ್ಲಿಡುವ ಐತಿಹಾಸಿಕ ವ್ಯವಸ್ಥೆಯೇ ನಾಶವಾಗಿ ಹೋಗುತ್ತದೆ ಎಂದು ಬಹುಶಃ ನಂಬಿದವರು ಗಾಂಧಿ. ಮತ್ತೆ ದಾರ್ಶನಿಕರಾದ ರಸ್ಕಿನ್, ಥೋರೋ, ಟಾಲ್‌ಸ್ಟಾಯ್ ಅವರನ್ನು ಆಳವಾಗಿ ಓದಿದ್ದ ಅವರಿಗೆ ನೈತಿಕ ಸಾಮ್ರಾಜ್ಯವೊಂದನ್ನು ಕಟ್ಟುವ ಭಾರತೀಯ ಬಗೆ ಸ್ಪಷ್ಟವಾಗಿ ಗೋಚರಿಸಿತ್ತು. ಈ ಹಿನ್ನೆಲೆಯಲ್ಲಿಯೇ ಅವರು ತಮ್ಮದೇ ಆದ, 'ಗಾಂಧಿಯನ್ ಸೋಷಿಯಲಿಸಂ' ಎಂದು ಕರೆಸಿಕೊಳ್ಳಲ್ಪಟ್ಟ ಸಾಮಾಜಿಕ ಆರ್ಥಿಕ ಚಿಂತನೆಯೊಂದನ್ನು ಅಭಿವೃದ್ಧಿಪಡಿಸಿದ್ದು ಯಾವ ರೀತಿಯ ಚಿಂತನೆಗಳಿಂದ ಗಾಂಧಿ ದೂರವಾಗಿಯೇ ಇದ್ದರು ಎನ್ನುವುದನ್ನೂ ಹೇಳಬೇಕು. (ಅಂದಿನ ಜಗತ್ತಿನ ಹಲವು ದೇಶಗಳು ಆಯ್ದುಕೊಂಡಿದ್ದ) ಪಾಶ್ಚಾತ್ಯ ಸಮಾಜವಾದಕ್ಕೆ ಗಾಂಧಿ ಆಕರ್ಷಿತರಾಗಲೇ ಇಲ್ಲ. ಏಕೆಂದರೆ ಗಾಂಧಿಗೆ ನೈತಿಕತೆಯನ್ನು ಪ್ರಧಾನವಾಗಿ ಹೊಂದಿರದ, ಜನರನ್ನು ಕೇವಲ ಆರ್ಥಿಕ ವರ್ಗಗಳನ್ನಾಗಿ ನೋಡುವ ಐಡಿಯಾಲಜಿಯ ಕುರಿತು ಅನುಮಾನವಿತ್ತು.

ಮೂಲತಃ ಧರ್ಮನಿಷ್ಠವಾಗಿದ್ದ, ಕಡುಬಡವನೂ ನೈತಿಕವಾಗಿ ಶ್ರೀಮಂತನೇ ಆಗಿದ್ದ ನಮ್ಮ ಸಮಾಜಕ್ಕೆ ಆ ತತ್ತ್ವ ಉಂಟುಮಾಡಬಹುದಾದ ಅಪಚಾರದ ಕಲ್ಪನೆ ಇತ್ತು. ಸಿದ್ಧಾಂತ ಹೇಳುವ ರೀತಿಯ 'ಸಮಾನತೆ'ಗೆ ಮರುಳಾಗಿ ಹೋದರೆ ಜನ ತಮ್ಮ ಧಾರ್ಮಿಕ/ ನೈತಿಕ ಹಿನ್ನೆಲೆಯಿಂದ ಹೊರಬಂದು 'ಅನ್ಯರಾಗಿ' ಹೋಗಿಬಿಡಬಹುದಾದ ಅಪಾಯದ ಅರಿವು ಇತ್ತು. ಹೀಗಾಗಿಯೇ ಗಾಂಧಿ ಭಾರತೀಯ ನೈತಿಕ ಬುನಾದಿಯ ಅಂಶಗಳಾದ ತ್ಯಾಗ, ಸತ್ಯ, ಆತ್ಮಗೌರವ, ಪಾಪ, ಪುಣ್ಯ, ಮೋಕ್ಷ ಇಂತಹ ಪರಿಕಲ್ಪನೆಗಳನ್ನು ಕಾಯ್ದುಕೊಂಡೇ ಬಂದು ಜನರ ನಡವಳಿಕೆಯನ್ನು ನಿಯಂತ್ರಿಸಿದ್ದು. ನಮ್ಮ ನೈತಿಕ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದೆಂದು ಅನಿಸಿದ್ದ ವಿಚಾರಧಾರೆಗೆ ಪ್ರೋತ್ಸಾಹ ನೀಡದಿದ್ದುದು.

ಭಾರತೀಯ ಪ್ರಜ್ಞೆಯಲ್ಲಿ ಗಾಂಧಿ ಸೃಷ್ಟಿಸಿದ ಇಂಥ ಜಾಗೃತಿಯಿಂದಾಗಿಯೇ ನಮ್ಮ ಜನ ಒಂದಾಗಿ ಸಮಾನತೆಯನ್ನು ನೈತಿಕ ನಡವಳಿಕೆಯಲ್ಲಿ ಕಂಡುಕೊಂಡು ಘನವಂತರಾಗಿ ಎದ್ದುನಿಂತಿದ್ದು. ಅಂದಿನ ಭಾರತೀಯರ ಮನಸ್ಸಿನಲ್ಲಿ ಬಲವಾಗಿ ಬೇರುಬಿಟ್ಟಿದ್ದು ನೈತಿಕವಾಗಿ ಭ್ರಷ್ಟನಾಗದಂತೆ ಬದುಕಬೇಕೆಂಬ ಬಯಕೆ. ಕಡುಬಡವರು ಕೂಡ ಹಣಕ್ಕಾಗಿ ಬದುಕಿರಲಿಲ್ಲ. ಅವರಿಗಿದ್ದ ಬಯಕೆ ಮಾನವಂತರಾಗಿ, ಧರ್ಮವಂತರಾಗಿ ಬದುಕಿ ಮೋಕ್ಷ ಪಡೆಯುವುದು. ಅನೈತಿಕ ಬದುಕನ್ನು ಘೋರ ಪಾಪವಾಗಿ ಕಂಡವರು ಅವರು.

ಭ್ರಷ್ಟ ಸಂಪತ್ತಿಗೆ ಸವಾಲು ಹಾಕಿ ಬದುಕಿದವರು. ಹೀಗೆ ಗಾಂಧಿ ತೋರಿದ ಬೆಳಕಿನಲ್ಲಿ ಜನ ತಮ್ಮ ತಮ್ಮ ಧರ್ಮ, ಜಾತಿ, ಮತ, ಇವನ್ನೆಲ್ಲ ಇಟ್ಟುಕೊಂಡೇ ಅವನ್ನು ಮೀರಿ ಎದ್ದು ನಿಂತಿದ್ದು ಬಹುಶಃ ಆಗ ಜನತೆ ಅಪ್ಪಟ ಪ್ರಾಮಾಣಿಕರಾಗಿ ಬದುಕಿದ್ದುದಕ್ಕೆ ಕಾರಣ.

ಆದರೆ ಈಗ ಆಗಿರುವುದೇ ಬೇರೆ. ನಂತರದ ದಶಕಗಳಲ್ಲಿ ಆರಂಭವಾದ ನಮ್ಮ ಅದಃಪತನ ಕ್ರಮೇಣ ವೇಗ ಪಡೆದು ಈಗಂತೂ ಮೌಲ್ಯಗಳ ವ್ಯವಸ್ಥೆ ಕುಸಿದುಹೋದಂತಿದೆ. ಜನ ಹಣಕ್ಕಾಗಿ ಎಂಥ ಹೀನ ಕೆಲಸಕ್ಕೂ ಇಳಿಯಲು ಹೇಸದಿರುವುದು ಹೌದು. ಎಲ್ಲೆಲ್ಲೂ ಕಾಣುತ್ತಿರುವುದು ವೈಯಕ್ತಿಕ, ಸಾಮಾಜಿಕ, ಸಾಂಸ್ಥಿಕ ಭ್ರಷ್ಟತೆಯ ಚಿತ್ರಗಳು. ಕೆಲವೇ ದಶಕಗಳ ಹಿಂದೆ ಹಾಗೆ ಇದ್ದ ಜನ ಹೀಗೇಕೆ ಆಗಿ ಹೋದರು?

ಮಹತ್ವದ ಕಾರಣ ಗಾಂಧಿ ಆಗ ಬಡಿದೆಬ್ಬಿಸಿದ್ದ ನೈತಿಕ ಶಕ್ತಿ ಈಗ ನಮ್ಮ ಸಮಾಜದಲ್ಲಿ ವಿಸ್ಮೃತಿಯಲ್ಲಿರುವಂತಿರುವುದು. ಅದು ಹೇಗೆ ಘಟಿಸಿಹೋಯಿತು ಎನ್ನುವುದೇ ನಮ್ಮ ಮುಂದಿರುವ ಮಹತ್ವದ ಪ್ರಶ್ನೆ. ಬಹುಶಃ ಇದಕ್ಕೆ ಒಂದು ಕಾರಣ ಗಾಂಧಿ ತಿರಸ್ಕರಿಸಿದಂತಿದ್ದ ಪಾಶ್ಚಾತ್ಯ ಸಮಾಜವಾದಿ ಸಿದ್ಧಾಂತ ನಂತರ ಸುಮಾರು ಐವತ್ತು ವರ್ಷಗಳ ಕಾಲ ನಮ್ಮ ಮನಸ್ಸನ್ನು ಆಳಿಬಿಟ್ಟಿದ್ದು. ಕುತೂಹಲವೆಂದರೆ ಆ ತತ್ತ್ವ ಕೂಡ ಗಾಂಧಿ ತತ್ವದಂತೆ ಬಡತನ ನಿರ್ಮೂಲನೆಯ, ಸರ್ವರನ್ನೂ ಒಳಗೊಳ್ಳುವ ಸಮಾಜವೊಂದನ್ನು ಸೃಷ್ಟಿಸುವ ಮಾತನಾಡುತ್ತಲೇ ಒಳಬಂದಿದ್ದು. ಭಾರತದಲ್ಲಿ ಅಸಮಾನತೆಗಳಿದ್ದುದು, ಇರುವುದೂ ಸುಳ್ಳಲ್ಲ. ಹೀಗಾಗಿ ಅದು ದೇಶದ ಮೇಲೆ ಭಾರೀ ಪ್ರಭಾವ ಬೀರಿತು. ಮತ್ತೆ ಸಿದ್ಧಾಂತವೇ ಕೆಟ್ಟದು ಎಂದೇನೂ ಅಲ್ಲ. ಅಥವಾ ಅದು ದೇಶಕ್ಕೆ ಮಾಡಿದ್ದೆಲ್ಲವೂ ಕೆಟ್ಟದು ಎಂದೂ ಅಲ್ಲ. ಅದರಲ್ಲಿಯೂ ಕೆಲವು ಹಿರಿಯ ನಾಯಕರು ಚಳವಳಿಗೆ ದೇಸೀ ಸ್ವರೂಪ ನೀಡಿದರು.

ಈ.ಎಂ.ಎಸ್.ನಂಬೂದರಿಪಾದ್, ಜಯಪ್ರಕಾಶ್ ನಾರಾಯಣ್, ಜ್ಯೋತಿ ಬಸು, ಇಂದಿರಾ ಗಾಂಧಿ, ದೇವರಾಜ ಅರಸು, ಜಾರ್ಜ್ ಫರ್ನಾಂಡಿಸ್ ಮತ್ತಿತರ ಹಿರಿಯರು ಸಿದ್ಧಾಂತದ ತತ್ತ್ವಗಳನ್ನು ಬಡತನ ನಿರ್ಮೂಲನೆಯಲ್ಲಿ, ಸಾಮಾಜಿಕ ಪಿಡುಗುಗಳ ನಿವಾರಣೆಯಲ್ಲಿ ಸಶಕ್ತವಾಗಿಯೇ ಬಳಸಿಕೊಂಡರು. ಹಾಗೆಯೇ ದೇಶಾದ್ಯಂತ ಲಕ್ಷಾಂತರ ಪ್ರಗತಿಶೀಲರು ಬಹುಶಃ ಅನಂತಮೂರ್ತಿಯವರ, ಲಂಕೇಶರ ಹಾಗೆ, ಗಾಂಧಿ ಮತ್ತು ಪಾಶ್ಚಾತ್ಯ ಸಮಾಜವಾದ ಎರಡರ

ಪ್ರಭಾವದಲ್ಲಿಯೂ ಬಂದು, ಮತ್ತೆ ಅದೇ ಸಮಯದಲ್ಲಿ ಎರಡೂ ಚಿಂತನೆಗಳ ಮಿತಿಗಳೂ ಕಣ್ಣಿಗೆ ಬಿದ್ದು ತೀವ್ರ ಗೊಂದಲಗಳಲ್ಲಿಯೂ ಸಿಲುಕಿದ್ದರು. ಆದರೆ ಇಂದಿನ ವಿಪರೀತದ ನೈತಿಕ ಸಮಸ್ಯೆಗಳನ್ನು ಸೃಷ್ಟಿಸಿದ್ದು ಸಿದ್ಧಾಂತದ ಒಂದು ಪಂಥದ 'ಉಗ್ರ,' (ಸೆಮಿನಾರುಗಳಲ್ಲಿ ಬೀಫ್ ತಿಂದು ತೋರಿಸಿಸುವುದನ್ನೇ ಹಿರಿಮೆಯಾಗಿಸಿಕೊಂಡ, ನಂಬಿಕೆಯ ಮೂಲಗಳಾದ ದೇವರು, ಧರ್ಮಗಳ ಕುರಿತು ಕೀಳು ಭಾಷೆಯಲ್ಲಿ ಮಾತನಾಡುವುದನ್ನು ಬಂಡಾಯವೆಂದುಕೊಂಡ) ತಿಕ್ಕಲು ವ್ಯಕ್ತಿತ್ವದವರು ನಡೆದ ದಾರಿ. ಈ ಪಂಥವು ಕ್ರಮೇಣ ಚಳವಳಿಯ ನೇತೃತ್ವವನ್ನು ಹಿಡಿದು ನಮ್ಮ ಇಡೀ ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆ ಸಾರಾಸಗಟಾಗಿಯೇ ತಿರಸ್ಕರಿಲರ್ಹವಾದ ಅಮಾನವೀಯ ವ್ಯವಸ್ಥೆಯಂತೆ ಕಂಡುಬಂದಿತ್ತು. ಅಲ್ಲದೆ ಅದು ಚಳವಳಿಯನ್ನು ಬುದ್ಧ, ಶಂಕರರು, ಬಸವಣ್ಣ, ಭಕ್ತಿ ಚಳವಳಿಗಳು, ಕನಕ, ಪುರಂದರ, ಶಿಶುನಾಳ ಶರೀಫ, ಗಾಂಧಿ ಹಾಗೆ ಇತಿಹಾಸದ ಭಾಗವಾದ ಚಳವಳಿಯನ್ನಾಗಿ ರೂಪಿಸದೆ ಜನರನ್ನು ನಮ್ಮ ಇತಿಹಾಸದಿಂದ ಹೊರಗಡೆ ತಂದು ಅವರನ್ನು 'ಜಾತ್ಯತೀತ, ಧರ್ಮರಹಿತ' ವ್ಯಕ್ತಿಗಳನ್ನಾಗಿ ನಿರೂಪಿಸಲು ಪ್ರಯತ್ನಿಸಿತು. ಮತ್ತು 'ಜಾತ್ಯತೀತ ಸಮಾಜವೊಂದನ್ನು' ಕಟ್ಟಲು ಯತ್ನಿಸಿತು.

ನಮ್ಮ ನೈತಿಕ ವ್ಯವಸ್ಥೆಯನ್ನೇ ಮೂಲೋತ್ಪಾಟನೆ ಮಾಡಲು ಪ್ರಯತ್ನಿಸಿತು. ಇತಿಹಾಸವನ್ನು ಗೇಲಿ ಮಾಡುತ್ತ ಜನರಲ್ಲಿ ಕೀಳರಿಮೆ ಬೆಳೆಸುತ್ತ ಹೋಯಿತು. ಮೌಲ್ಯಗಳ ಚೌಕಟ್ಟನ್ನು ಮುರಿದುಹಾಕಿತು. ಜನರನ್ನು ಕೂಡಿಸುವ ಗಾಂಧಿ ಪ್ರಯತ್ನಕ್ಕೆ ವಿರುದ್ಧವಾಗಿ ನಡೆಯಲು ಪ್ರಯತ್ನಿಸಿತು. ಈ ಹುಚ್ಚಿಗೆ ಸಿಲುಕಿಕೊಂಡ ಸಾರ್ವಜನಿಕ ಬದುಕು ತನ್ನ ಪರಂಪರೆಯನ್ನು ಬಿಟ್ಟು ಸಂಕೋಲೆಗಳನ್ನು ಬಿಚ್ಚಿಹಾಕಿ ಬಯಲಲ್ಲಿ ಬಂದು ನಿಂತಿತು. ಸಂಸ್ಕೃತಿಯಿಂದ ಹೊರಬಂದ ಜನ ಜಾತ್ಯತೀತರಾಗಿ ಹೋದರು.

ರಾಮಾಯಣ, ಮಹಾಭಾರತ, ನೀತಿಕಥೆಗಳು, ಧರ್ಮಗಳು, ನಂಬಿಕೆಗಳು ಹಾಸ್ಯದ ವಿಷಯಗಳಾಗಿ ಹೋದವು. ಇನ್ನೂ ಮಹತ್ವದ ವಿಷಯವೆಂದರೆ ಕೆಲವರು ಸಂಸ್ಕೃತಿಯ ಅವಹೇಳನವನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡು ರಾಜಕೀಯವನ್ನು ಆರಂಭಿಸಿದರು. ಇಂಥವರ ಕೈಯಲ್ಲಿ ಮಾಧ್ಯಮಗಳು, ಅಧಿಕಾರ ಇದ್ದವು. ಶಿಕ್ಷಣದ ನೀತಿ ನಿರೂಪಣೆಯ ಜವಾಬ್ದಾರಿಯೂ ಇತ್ತು. ನಂತರ ನಮ್ಮ ಮನಸ್ಸನ್ನು ಆಳಿದ್ದು ಒಂದು ಸಿದ್ಧಾಂತದ ರಾಜಕೀಯಕರಣವನ್ನು ಎತ್ತಿ ಹಿಡಿದ ಪಠ್ಯಪುಸ್ತಕಗಳು. ಅಂಥ ಗುಂಗಿನಲ್ಲಿದ್ದ ಪ್ರಾಧ್ಯಾಪಕರುಗಳು ಮತ್ತು ಶಿಕ್ಷಕರು. ಸಂಸ್ಕೃತಿಯ ಲಯ ನಮ್ಮ ಶಾಲೆಗಳಿಂದ, ಸಮಾಜದಿಂದ ಮಾಯವಾಗಿ ಹೋಯಿತು.

ಸಮಾಜವಾದಿ ಚಿಂತಕರು ಹಲವೊಮ್ಮೆ ಯುವ ಜನತೆಯಲ್ಲಿರುವ ಸಹಜವಾದ ಆದರ್ಶದ ಮನೋವೇದಿಕೆಯನ್ನು ಇತಿಹಾಸವನ್ನು ಹೀಗಳೆಯಲು ಬಳಸಿಕೊಂಡರು. ಇಂಥ ಮಾತುಗಳನ್ನು ಆಡಿದವರು ಬುದ್ಧಿಜೀವಿಗಳಾಗಿ ವಿಜೃಂಭಿಸಿದರು. ಸಂಸ್ಕೃತಿಯ, ಇತಿಹಾಸದ ತೇಜೋವಧೆ ಮಾಡುವುದು ಈಗ ಒಂದು ಜನಪ್ರಿಯ ಹವ್ಯಾಸವಾಗಿ, ಪ್ರಚಾರದ ತಂತ್ರವಾಗಿ, ಸ್ಟ್ಯಾಂಡ್ ಅಪ್ ಕಾಮೆಡಿಯಾಯಿತು. ಬಯಲಲ್ಲಿ ನಿಂತ ಜನ ಪಾಪ ಪುಣ್ಯಗಳ ಪ್ರಜ್ಞೆ ಕಳೆದುಕೊಂಡು ನಿಂತರು. ತಮ್ಮ ಪೂರ್ವಜರು ತೋರಿದ್ದ ಘನತೆಯನ್ನೆಲ್ಲ ಮರೆತು ಭಯ ತೊರೆದು, ಕಟ್ಟುಪಾಡು ಬಿಚ್ಚಿ ಹಾಕಿ ಭ್ರಷ್ಟಚಾರದಲ್ಲಿ, ಅನೈತಿಕತೆಯಲ್ಲಿ ಮುಳುಗಿದರು.

ಜಾಗತೀಕರಣವೂ ನಮ್ಮನ್ನು ಆಳವಾಗಿಯೇ ಬಾಧಿಸಿದೆ. ವ್ಯಂಗ್ಯದ ವಿಷಯವೆಂದರೆ ಇಂಥ ಸಮಾಜವಾದಿ ಚಿಂತಕರು ಜಾಗತೀಕರಣವನ್ನು ಎಷ್ಟೇ ವಿರೋಧಿಸಿದರೂ ಅದು ಭಾರಿ ಪ್ರಮಾಣದಲ್ಲಿ ಬೆಳೆದು ನಿಲ್ಲಲು ಬೇಕಿದ್ದ ರೀತಿಯ (ಮೌಲ್ಯ ರಹಿತ) ಮನಸ್ಸುಗಳನ್ನು ಸೃಷ್ಟಿಸಿಬಿಟ್ಟಿದ್ದರು. ನಮ್ಮ ಜನ ಈಗಾಗಲೇ ಹೊರಬಂದು ನಿಂತು ಸಾಂಸ್ಕೃತಿಕವಾಗಿ ನ್ಯೂಟ್ರಲ್ ಆಗಿಹೋಗಿದ್ದರು. ಮತ್ತೆ ಮೈದಾನ ಖಾಲಿಯಾಗಿಯೇ ಇತ್ತು. 'ಸ್ವದೇಶ'ದಿಂದ ಹೊರಬಂದವರು ವಿದೇಶಿಯಾಗಲೇಬೇಕಲ್ಲ? ನಮ್ಮ ಜನ ಈಗಾಗಲೇ ಹೊರಬಂದು ನಿಂತು ಸಾಂಸ್ಕೃತಿಕವಾಗಿ ನ್ಯೂಟ್ರಲ್ ಆಗಿಹೋಗಿದ್ದರು. ಮತ್ತೆ ಈಗ ಜಾಗತೀಕರಣ ನೈತಿಕ ಅಧೋಗತಿಯ ವೇಗವನ್ನು ಅಧಿಕಗೊಳಿಸಿದೆ.

ಇದನ್ನೆಲ್ಲ ಹೇಳಿದ್ದು ನಮ್ಮ ಇತಿಹಾಸವನ್ನು ಅತಿಯಾಗಿ ರಂಜಿಸಿಕೊಂಡು, ಒಂದು ಹೈಪರ್ ನ್ಯಾಷನಲಿಸಂ ಅನ್ನು ಸೃಷ್ಟಿಸಬೇಕಿತ್ತು. ಅಥವಾ ಸೃಷ್ಟಿಸಬೇಕು ಎಂದೇನೂ ಅಲ್ಲ. ಅಥವಾ ನಮ್ಮ ಧರ್ಮ, ಜಾತಿ ವ್ಯವಸ್ಥೆ ಸರಿ ಇತ್ತು ಎಂದು ಹೇಳುವುದೂ ಉದ್ದೇಶವಲ್ಲ. ಜಾತಿ ವ್ಯವಸ್ಥೆ ಇತಿಹಾಸದಲ್ಲಿ ದೊಡ್ಡ ದುರಂತಗಳಿಗೆ ಕಾರಣವಾಗಿದೆ. ನಿಜ. ಆದರೆ ನಿಜಕ್ಕೂ ನಮ್ಮ ಆಂತರಿಕ ಸುಧಾರಣೆಯ ದಾರಿ ಇದ್ದದ್ದು, ಇರುವುದು ಜನರನ್ನು ವ್ಯವಸ್ಥೆಯಿಂದ ಹೊರತರುವುದರಲ್ಲಿ ಅಲ್ಲ. ದಾರಿ ಇದ್ದದ್ದು, ಇರುವುದು ಆಂತರಿಕವಾದ ನೈತಿಕ ಚಳವಳಿಗಳಲ್ಲಿ. ಮತ್ತು ಕಾನೂನಾತ್ಮಕ ಕ್ರಮಗಳಲ್ಲಿ.

ಕುಸಿದ ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಯನ್ನು ಸರಿಪಡಿಸುವ ಮಾರ್ಗ ಒಂದೇ. ಗಾಂಧಿ ತೋರಿದ ಮಾರ್ಗವನ್ನು ಮತ್ತೆ ಎತ್ತಿ ಹಿಡಿಯುವುದು. ಹಾಗೆಂದು ಅದೆಲ್ಲ ಸುಲಭವೇನೂ ಅಲ್ಲ. ಏಕೆಂದರೆ ನಮ್ಮ ಧರ್ಮಗಳ ಸ್ವರೂಪಗಳೂ ಇಂದು ಬದಲಾಗಿ ಹೋಗಿದ್ದು ಅವು ಕೂಡ ತಮ್ಮ ಮುಗ್ಧತೆಯನ್ನು ಕಳೆದುಕೊಂಡು ಕುಳಿತಿರುವಂತೆ ಅನಿಸುತ್ತಿದೆ. ಆದರೂ ಅದನ್ನು ಮಾಡಲೇಬೇಕು.

ನಮಗೆ ಉಳಿದಿರುವ ಒಂದು ದಾರಿಯೆಂದರೆ ಆ ಸಂಸ್ಕೃತಿಯನ್ನು ಅದರ ಮಾನವೀಯತೆಯನ್ನು, ನೈತಿಕತೆಯನ್ನು ಮತ್ತೆ ನಮ್ಮ ಕರಿಕ್ಯುಲಮ್‌ನ ಭಾಗವಾಗಿಸುವದು. ನಮ್ಮ ಪರಂಪರೆಯ ಪಠ್ಯಗಳನ್ನು, ಇತಿಹಾಸವನ್ನು ಬೋಧಿಸುವುದು. ಪ್ರಸ್ತುತದ ನಮ್ಮ ನೈತಿಕ ಸವಾಲುಗಳಿಗೆ ಬಹುಶಃ ಉತ್ತರ ಇದು.

ಬಿಟ್ಟೆನೆಂದರೂ ಬಿಟ್ಟು ಬಿಡದೀ ಹುಟ್ಟುಗುಣ!

ಅಭಿಮತ

ಡಾ.ಕೆ.ಪಿ. ಪುತ್ತೂರಾಯ

drputhuraya@yahoo.co.in

ಕೆಲವು ಗುಣಗಳೇ ಹಾಗೆ, ನಮ್ಮನ್ನು ಅಂಟಿಕೊಂಡಿರುತ್ತವೆ. ಇವನ್ನೇ ಹುಟ್ಟು ಗುಣಗಳೆಂದೂ ಕರೆಯಬಹುದು. ಇವು ದುರ್ಗುಣಗಳೆಂದು ನಮಗೆ ಗೊತ್ತಿದ್ದರೂ, ಹಾಗೂ ಅವುಗಳಿಂದ ದೂರವಿರಬೇಕೆಂದು ನಾವು ಬಯಸಿದರೂ, ಅಷ್ಟು ಸುಲಭದಲ್ಲಿ ಅವು ನಮ್ಮನ್ನು ಬಿಟ್ಟು ಹೋಗಲಾರವು. ಬಾಯಿಯಲ್ಲಿ ನಾವು ಅದನ್ನು ಈಗ ಬಿಟ್ಟಿದ್ದೇವೆ ಎಂದು ಹೇಳಿದರೂ, ಆ ಗುಣ ಪ್ರಕಟವಾಗುತ್ತಲೇ ಮುಂದುವರಿಯುತ್ತಲೇ ಇರುತ್ತದೆ. ಇದಕ್ಕೆ ಹಲವಾರು ನಿದರ್ಶನಗಳಿವೆ.

ಸಾಮಾನ್ಯವಾಗಿ ತಮ್ಮ ಜೀವಿತಾಕಾಲದಲ್ಲಿ ಒಮ್ಮೆಯಾದರೂ ಕಾಶಿಗೆ ಹೋಗಿ, ಅಲ್ಲಿಯ ಗಂಗಾನದಿಯಲ್ಲಿ ಸ್ನಾನಮಾಡಿ, ಕಾಶಿ ವಿಶ್ವನಾಥನ ದರ್ಶನ ಪಡೆದು ಬರಬೇಕೆಂಬುದು ಎಲ್ಲ ಹಿಂದುಗಳ ಅಭಿಲಾಷೆ. ಕಾರಣ ಹೀಗೆ ಮಾಡೋದರಿಂದ ತಮ್ಮ ಪಾಪಗಳ ಪರಿಹಾರವಾದೀತೆಂಬುದು ಅವರ ನಂಬಿಕೆ. ಹೀಗೆ ಹೋದವರು, ಕಾಶಿಗೆ ಹೋದ ಸ್ಮರಣಾರ್ಥ ಅಲ್ಲಿಂದ ಹಿಂದಿರುಗುವ ವೇಳೆ, ತಮಗೆ ಅತ್ಯಂತ ಪ್ರಿಯವಾದ ಯಾವುದಾದರೊಂದು ವಸ್ತು ವಿಷಯ ಇಲ್ಲವೇ ತಾವು ಬಿಟ್ಟಿರಲಾಗದ ಯಾವುದಾದರೊಂದು ಚಾಳಿಯನ್ನು ಅಲ್ಲಿಯೇ ಬಿಟ್ಟು ಬರುವುದು ವಾಡಿಕೆ. ಮತ್ತೆ ಅದನ್ನು ಜೀವನ ಪರ್ಯಂತ ಮರುಬಳಕೆ ಮಾಡುವಂತಿಲ್ಲ, ಕೆಲವರು ತಮಗೆ ಇಷ್ಟವಾದ ಹಣ್ಣು, ಹಂಪಲು ತರಕಾರಿ ಸಿಹಿ ತಿಂಡಿಗಳನ್ನು ತ್ಯಜಿಸಿದರೆ, ಇನ್ನು ಕೆಲವರು ತಮ್ಮಿಂದ ತಡೆ ಹಿಡಿಯಲಾಗದ, ನಿಭಾಯಿಸಲಾಗದ, ಕೆಟ್ಟ ಗುಣ ಸ್ವಭಾವಗಳನ್ನು ಬಿಟ್ಟು ಬರೋದುಂಟು.

ಒಂದು ಊರಿನಲ್ಲಿ ಒಬ್ಬರು ಮೇಷ್ಟರು ಇದ್ದರು. ಅವರು ಭಾರೀ ಮುಂಗೋಪಿ ಸ್ವಭಾವದವರಾಗಿದ್ದರು. ಸಣ್ಣಪುಟ್ಟ ವಿಚಾರಗಳಿಗೂ ಸಿಟ್ಟುಗೊಳ್ಳುತ್ತಿದ್ದರು. ಶಾಲೆಯ ಮಕ್ಕಳಿಗೆ ಮಾತ್ರವಲ್ಲ; ಮನೆಯಲ್ಲೂ ಅವರನ್ನು ಕಂಡರೆ ಎಲ್ಲರಿಗೂ ಭಯ. ಒಮ್ಮೆ ಕಾಶಿ ಯಾತ್ರೆಗೆ ಹೊರಟ ಇವರು 'ಹಾಗೆ ಹೋದವನು ಏನನ್ನು ಬಿಟ್ಟು ಬರಲಿ?' ಎಂದು ಮಡದಿಯನ್ನು ಕೇಳಿದಾಗ 'ಸಿಟ್ಟನ್ನು ಬಿಟ್ಟು ಬನ್ನಿ' ಎಂಬ ಸೂಚನೆಯನ್ನು ನೀಡುತ್ತಾಳೆ. ಅಂತೆಯೇ ಕಾಶಿಯಲ್ಲಿ ' ಇನ್ನು ಮುಂದೆ ನಾನು ಸಿಟ್ಟಿಗೇಳುವುದಿಲ್ಲ, ಸಿಟ್ಟನ್ನು ಇಲ್ಲೇ ಬಿಟ್ಟು ಬಿಟ್ಟಿದ್ದೇನೆ' ಎಂಬ ಸಂಕಲ್ಪವನ್ನು ಮಾಡುತ್ತಾರೆ. ಕಾಶಿಯಿಂದ ಹಿಂತಿರುಗಿದ ಇವರನ್ನು ಶಾಲಾ ಮಕ್ಕಳು ಒಬ್ಬೊಬ್ಬರಾಗಿಯೇ ಕೇಳಲಾರಂಭಿಸಿದರು.

'ಕಾಶಿಗೆ ಹೋಗಿ ಏನನ್ನು ಬಿಟ್ಟು ಬಂದಿರಿ ಸಾರ್?' 'ಸಿಟ್ಟನ್ನು ಬಿಟ್ಟು ಬಂದಿರುವೆನಪ್ಪಾ' ಎಂದು ಒಬ್ಬನಿಗೆ ಹೇಳಿದರು. ಅಷ್ಟರಲ್ಲಿ ಇನ್ನೊಬ್ಬ ಹುಡುಗ ಇದೇ ಪ್ರಶ್ನೆಯನ್ನು ಕೇಳಲು ಅವನಿಗೂ ಇದೇ ಉತ್ತರವನ್ನು ನೀಡಿದರು. ಈ ಸುದ್ದಿ ಶಾಲೆಯಲ್ಲಿ ಹರಡುತ್ತಲೇ ಇನ್ನಷ್ಟು ಸಹೋದ್ಯೋಗಿಗಳು, ಮಕ್ಕಳು ಮತ್ತೆ ಮತ್ತೆ ಇದೇ ಪ್ರಶ್ನೆಯನ್ನು ಕೇಳಲಾರಂಭಿಸಿದರು. ಕೆಲವರಂತೂ 'ನಿಮಗೆ ಇದು ಹೇಗೆ ಸಾಧ್ಯ?' ಎಂದು ಹೇಳುತ್ತಾ ಇವರನ್ನು ಚುಡಾಯಿಸಿದರೆ, ಕೆಲವರು ನಿಜವಾಗಿಯೂ ನೀವು ಸಿಟ್ಟು ಮಾಡೋದನ್ನು ಬಿಟ್ಟು ಬಿಟ್ಟರೇನು ಸಾರ್?' ಎಂದು ಕೇಳಲು ತಾಳ್ಮೆ ತಪ್ಪಿದ ಮೇಷ್ಟರು ಹಾಗೆ ಕೇಳಿದ ಹುಡುಗನಿಗೆ ಕಣ್ಣು ಕೆಂಪಗೆ ಮಾಡಿಕೊಂಡು 'ಎಷ್ಟು ಸಲ ಇದೇ ಪ್ರಶ್ನೆಯನ್ನು ಕೇಳ್ತಾ ಇದ್ದೀಯಾ, ನಿನಗೆ ಬುದ್ಧಿ ಗಿದ್ಧಿ ಇದೆಯಾ ಕತ್ತೆ' ಎಂದು ಹೇಳುತ್ತಾ ಕಪಾಳಕ್ಕೆ ಎರಡು ಬಿಗಿದು ಕಳುಹಿಸಿದರು. ತಾತ್ಪರ್ಯ ಇಷ್ಟೆ. ಇವರು ಸಿಟ್ಟನ್ನು ಗೆದ್ದವರಾಗಿರಲಿಲ್ಲ. ಸಿಟ್ಟಿಗೆದ್ದವರಾಗಿದ್ದರು. ಅಧಿಕಾರದ ವ್ಯಾಮೋಹ, ಭ್ರಷ್ಟಾಚಾರ, ಜಾತೀಯತೆ, ಮತಾಂಧತೆ, ಕುಡಿತ, ಜೂಜು, ಕಳ್ಳತನ, ವೇಶ್ಯಾವಾಟಿಕೆ, ಮೋಹ, ಅಸೂಯೆ, ಅತಿಆಸೆ, ಸ್ವಪ್ರಶಂಸೆ, ಪರನಿಂದನೆ. ತುಲನೆ, ಮೇಲರಿಮೆ, ಕೀಳರಿಮೆ, ಹೊಟ್ಟೆಕಿಚ್ಚು, ಹಠ -ಚರ್ಚೆ, ಪ್ರಚಾರ ಪ್ರಿಯತೆ, ಮತ್ಸರ, ಮೂಢನಂಬಿಕೆ, ಮುಂತಾದ ಯಾವುದೇ ದುರ್ಬುದ್ಧಿ ದುರ್ಗುಣಗಳಿಂದ ಬಿಡುಗಡೆ ಹೊಂದಲು ಬರೇ ಸಂಕಲ್ಪವೊಂದೇ ಸಾಲದು. ಆಚರಣೆಯೂ ಬೇಕು. ದೃಢ ನಿರ್ಧಾರವೂ ಬೇಕು; ಇಚ್ಛಾಶಕ್ತಿಯೂ ಬೇಕು.

ಭಟ್ಟರ್ ಸ್ಕಾಚ್

● **ಮಾಲಾ, ಪುತ್ತೂರು**
ಇಲ್ಲೊಬ್ಬ, ಅದೆಂಥ ಜೋಕು ಹೇಳಿದರೂ ನಗುವುದೇ ಇಲ್ವಲ್ಲಾ ಏನು ಮಾಡೋದು, ಭಟ್ರೇ?
- ಅವನ ಮುಂದೆ ರೇವಣ್ಣನ ಫೋಟೋ ಹಿಡಿ, ನಕ್ಕರೂ ನಗಬಹುದು!

● **ಸೀತಾಬಾಯಿ, ಚಡಚಣ**
ನಿಂಬೆಹಣ್ಣು ಯಾಕೆ ಅಷ್ಟೊಂದು ಪವರ್ ಫುಲ್, ಭಟ್ರೇ?
- ಈ ಪ್ರಶ್ನೆಯನ್ನು ರೇವಣ್ಣನವರಿಗೆ ಫಾರ್ವರ್ಡ್ ಮಾಡಲಾಗಿದೆ!

● **ವಿ. ಹೇಮಂತ ಕುಮಾರ್, ಬೆಂಗಳೂರು**
ನಮ್ಮ ಸಮಾಜದಲ್ಲಿ ಆರೈಕೆ ಮಾಡುವವರಿಗಿಂತ ಆಡಿಕೊಳ್ಳುವವರೇ ಜಾಸ್ತಿ ಅಲ್ಲವೇ, ಭಟ್ರೇ?
- ಏನು ಮಾಡೋದು, ನೀರು ತಗ್ಗು ಪ್ರದೇಶಕ್ಕೆ ಬೇಗ ಹರಿಯುತ್ತದೆ!

● **ಶ್ರೀಪತಿ ಹೆಗಡೆ, ಶಿರಸಿ**
ಭಟ್ರೇ, ಇಲ್ಲೊಬ್ಬ ಮಿಸ್ಡ್ ಕಾಲ್‌ಗೇ ಪುಳಕಗೊಳ್ಳುತ್ತಾನಲ್ಲ?
- ಕೆಲವರಿಗೆ ಅಲ್ಪ ಸಂತಸವನ್ನೂ ಹಿಡಿದಿಟ್ಟುಕೊಳ್ಳಲಾಗುವುದಿಲ್ಲ!

● **ಲಾವಣ್ಯ ಗೌಡ, ಪದ್ಮನಾಭನಗರ**
ಭಟ್ರೇ, ಈ ಪರಿ ಕರೋನಾ ಹಬ್ಬುತ್ತಿದೆಯಲ್ಲ?
- ಟಿವಿ ನೋಡಿದ್ರೆ ಮಾತ್ರ ಕರೋನಾ ಇದ್ದಂತೆ ಭಾಸವಾಗುತ್ತದಪ್ಪಾ!

● **ರವಿಕಾಂತ ಬಿ.ಎಂ., (ಇಮೇಲ್ ಮೂಲಕ)**
ಭಟ್ರೇ, ಟಿವಿಯಲ್ಲಿ ಸೀಡಿ ಪ್ರಕರಣದ ತೀವ್ರತೆ ಸ್ವಲ್ಪ ಕಡಿಮೆ ಆಯ್ತಾ?
- ಇದಕ್ಕಾದರೂ ಮುಷ್ಕರ ನಿರತ ಸಾರಿಗೆ ನೌಕರರನ್ನು ಅಭಿನಂದಿಸಲೇಬೇಕು!

● **ಶ್ರೀರಾಮ ಪೂಂಜಾ, ಉಡುಪಿ**
ಭಟ್ರೇ, ಕೋಡಿಹಳ್ಳಿಗೂ, ಸಾರಿಗೆ ಮುಷ್ಕರಕ್ಕೂ ಏನು ಸಂಬಂಧ?
- ಸಂಬಂಧವೇನೂ ಇಲ್ಲ, ಆದರೆ ಮುಷ್ಕರದಲ್ಲೂ ಒಳ್ಳೆಯ ಫಸಲು ತೆಗೆಯುವುದು ಹೇಗೆ ಎಂಬುದು ಅವರಿಗೆ ಗೊತ್ತು!

● **ಮುರಳಿ ಶಾನಭಾಗ, ಶಿವಮೊಗ್ಗ**
ಭಟ್ರೇ, ದೇವೇಗೌಡರಿಗೆ ಮೊಮ್ಮಕ್ಕಳ ಜತೆ ಆಟವಾಡಬೇಕು ಎಂದು ಅನಿಸುವುದಿಲ್ಲವಾ?
- ಅವರ ಜತೆಯೂ ರಾಜಕೀಯದ ಆಟ ಆಡುವ ಚಪಲವಂತೆ!

● **ಮಲ್ಲೇಶಿ ತುರುವಿನಹಾಳ, ಬೆಂಗಳೂರು**
ಭಟ್ರೇ, ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿ ಆಗ್ತಾರೆ ಎಂದು ನನ್ನ ಸ್ನೇಹಿತನೊಬ್ಬ ಹೇಳ್ತಾನಲ್ಲ?
- ತಲೆಕೆಟ್ಟ ಜ್ಯೋತಿಷಿ ಮಾತ್ರ ಹಾಗೆ ಹೇಳ್ತಾನೆ ಅಂತ ಭಾವಿಸಿದ್ದೆ!

● **ಸಿದ್ದೇಶ ಕುಬಸದ, ಹುಬ್ಬಳ್ಳಿ**
ಭಟ್ರೇ, ನೀವು ವಾಸ್ತು ನಂಬುತ್ತೀರಾ?
- ವಾಸ್ತವದಲ್ಲಿ ಮಾತ್ರ ನಂಬಿಕೆ!

ತೈಲ ಹೊರೆ, ಮಾಲಿನ್ಯ ಬರೆ: ಎಲೆಕ್ಟ್ರಿಕ್ ವಾಹನಗಳ ಮೊರೆ

ಅಭಿವ್ಯಕ್ತಿ

ಪ್ರವೀಣ ವಿವೇಕ

praveenvivek54@gmail.com

2019 – 20ರಲ್ಲಿಯೇ ದೇಶಾದ್ಯಂತ 2.6 ಕೋಟಿಗೂ ಅಧಿಕ ವಾಹನಗಳು ಉತ್ಪನ್ನವಾಗಿವೆ ಎಂದು ಆಟೋಮೊಬೈಲ್ ಉತ್ಪಾದಕರ ಸಂಘಟನೆಯ ಸಿಯಾನ್ ವರದಿ ತಿಳಿಸುತ್ತದೆ. ಇನ್ನು ಭಾರತ ಜಗತ್ತಿನಲ್ಲೆ 5ನೇ ಅತೀ ಹೆಚ್ಚು ಕಾರು ತಯಾರಿಕೆ ಹಾಗೂ ಮಾರಾಟ ಮಾಡುವ ದೇಶವಾಗಿದೆ. ಜಗತ್ತಿನಲ್ಲಿ ಚೀನಾ ಮತ್ತು ಅಮೆರಿಕದ ನಂತರ ಅತೀ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುವ ದೇಶವೇ ಭಾರತ. ನಮ್ಮ ಬೇಡಿಕೆಯ ಶೇ.65ರಷ್ಟು ತೈಲವನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತವೆ. 2014 –15ರಲ್ಲೆ 112 ಬಿಲಿಯನ್ ಡಾಲರ್ ಅಂದರೆ ಸುಮಾರು 7 ಲಕ್ಷ ಕೋಟಿಯಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತಿತ್ತು.

ಜಗತ್ತಿನಲ್ಲಿ ಈಗಾಗಲೇ ಇರುವ ಸಮಸ್ಯೆಗಳಿಗೆ ಸೇರ್ಪಡೆಯಾಗಿರುವುದು ಪೆಟ್ರೋಲ್ ಬಿಕ್ಕಟ್ಟು. ವಾಹನಗಳು ಇಲ್ಲದಿದ್ದಾಗ ಜನ ನೆಮ್ಮದಿಯಿಂದ ಇದ್ದರು. ವಾಹನಗಳು ಆವಿಷ್ಕಾರಗೊಂಡ ನಂತರ ಹಲವು ಸಮಸ್ಯೆಗಳು ಉದ್ಭವವಾಗಿವೆ. ವಾಹನಗಳಿಗೆ ಪೆಟ್ರೋಲ್, ಡೀಸೆಲ್, ನುಣುಪಾದ ರಸ್ತೆಗಳು ಬೇಕಾಗುತ್ತವೆ. ಜತೆಗೆ ಈ ವಾಹನಗಳಿಗೆ ಪೂರಕವಾಗುವಂತೆ ಇನ್ನೂ ಅನೇಕ ಸಂಗತಿಗಳು ಅನಿವಾರ್ಯವಾಗುತ್ತವೆ. ಕಾಲಾ ನಂತರದಲ್ಲಿ ವಾಹನಗಳು ಮನುಷ್ಯ ಜೀವನದ ಭಾಗವಾಗುತ್ತವೆ. ಇದರಿಂದ ಹಲವಾರು ಸಮಸ್ಯೆಗಳು ಉಂಟಾಗುತ್ತವೆ ಎಂದು ಇಸ್ಕಾನ್‌ನ ಶ್ರೀ ಪ್ರಭುಪಾದರು 1974ರಲ್ಲಿ ಹೇಳಿದ್ದರು. ಅವರು ಅಂದು ಉಚ್ಚರಿಸಿದ ಮಾತು ಇಂದು ಅದೆಷ್ಟು ಪ್ರಸ್ತುತವಲ್ಲವೇ?

1981ರಲ್ಲಿ ಕೇವಲ 5.4 ಮಿಲಿಯನ್ ವಾಹನಗಳು ಮಾತ್ರ ದೇಶದಲ್ಲಿದ್ದವು. ವಾಹನಗಳ ಮೇಲಿನ ಅವಲಂಬನೆ ಹೆಚ್ಚುತ್ತಿರುವ ಕಾರಣದಿಂದ ಭಾರತೀಯ ಆಟೋಮೊಬೈಲ್ ಕ್ಷೇತ್ರ ತನ್ನ ಕಬಂಧ ಬಾಹುಗಳನ್ನು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ವಿಸ್ತರಿಸಿಕೊಳ್ಳುತ್ತಿದೆ. 2019 – 20ರಲ್ಲಿಯೇ ದೇಶಾದ್ಯಂತ 2.6 ಕೋಟಿಗೂ ಅಧಿಕ ವಾಹನಗಳು ಉತ್ಪನ್ನವಾಗಿವೆ ಎಂದು ಆಟೋಮೊಬೈಲ್ ಉತ್ಪಾದಕರ ಸಂಘಟನೆಯ ಸಿಯಾನ್ ವರದಿ ತಿಳಿಸುತ್ತದೆ. ಇನ್ನು ಭಾರತ ಜಗತ್ತಿನಲ್ಲೆ 5ನೇ ಅತೀ ಹೆಚ್ಚು ಕಾರು ತಯಾರಿಕೆ ಹಾಗೂ ಮಾರಾಟ ಮಾಡುವ ದೇಶವಾಗಿದೆ.

ಜಗತ್ತಿನಲ್ಲಿ ಚೀನಾ ಮತ್ತು ಅಮೆರಿಕದ ನಂತರ ಅತೀ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುವ ದೇಶವೇ ಭಾರತ. ನಾವು ನಮ್ಮ ಬೇಡಿಕೆಯ ಶೇ.65ರಷ್ಟು ತೈಲವನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತವೆ. ನಮ್ಮ ದೇಶ 2014 –15ರಲ್ಲೆ 112 ಬಿಲಿಯನ್ ಡಾಲರ್ ಅಂದರೆ ಸುಮಾರು 7 ಲಕ್ಷ ಕೋಟಿಯಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತಿತ್ತು. ವಿಶ್ವದ ಒಟ್ಟು ಬಳಕೆಯ ಶೇ.4.6 ರಷ್ಟು ತೈಲವನ್ನು ಭಾರತವೇ ಖರೀದಿ ಮಾಡುತ್ತದೆ. ಕರೋನಾ ವೈರಸ್ ಜಗತ್ತಿಗೆ ಕಾಲಿಟ್ಟ ನಂತರ ವ್ಯಾಪಾರ ವಹಿವಾಟುಗಳು ಸ್ಥಗಿತವಾಗಿದ್ದರಿಂದ ತೈಲದ ಬೇಡಿಕೆ ಕುಸಿದಿದ್ದರಿಂದ ತೈಲ ದರ ಪಾತಾಳಕ್ಕೆ ಇಳಿಯಿತು, ಕರೋನಾ ಲಾಕ್ ಡೌನ್ ಸಮಯದಲ್ಲಿ ಕೇವಲ 9 ಡಾಲರ್‌ಗೆ ಒಂದು ಬ್ಯಾರಲ್ ಕಚ್ಚಾ ತೈಲ ಸಿಗುತ್ತಿತ್ತು. ಆದರೆ ಈಗ ಲಾಕ್ ಡೌನ್ ಸಡಿಲಗೊಂಡು ಆರ್ಥಿಕ ಚಟುವಟಿಕೆಗಳು ಪುನರ್ ಆರಂಭಗೊಂಡಿರುವುದರಿಂದ ತೈಲಕ್ಕೆ ಹೆಚ್ಚಿನ ಬೇಡಿಕೆ ಬಂದಿದೆ, ವಿಪರ್ಯಾಸವೆಂದರೆ ತೈಲ ಉತ್ಪನ್ನ ರಾಷ್ಟ್ರಗಳು ಉತ್ಪಾದನೆಯನ್ನು ಕಡಿತಗೊಳಿಸಿವೆ. ಇದರಿಂದ ಒಂದು ಬ್ಯಾರಲ್ ಕಚ್ಚಾ ತೈಲದ ಬೆಲೆ ಈಗ 65 ಡಾಲರ್ ಆಗಿದೆ.

ಬೇರೆ ದೇಶಗಳಿಂದ ಆಮದು ಮಾಡಿಕೊಂಡಿರುವ ತೈಲಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತ್ಯೇಕವಾಗಿ ತೆರಿಗೆಯನ್ನು ವಿಧಿಸುತ್ತವೆ. ಮೊನ್ನೆ ನಡೆದ ಸಂಸತ್ ಅಧಿವೇಶನದಲ್ಲಿ ಸಂಸದರೊಬ್ಬರು ನೀಡಿದ ಮಾಹಿತಿ ಪ್ರಕಾರ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತಿ ವರ್ಷವೂ ತೈಲದಿಂದಲೇ ಸುಮಾರು 5 ಲಕ್ಷ ಕೋಟಿ ತೆರಿಗೆಯನ್ನು ಸಂಗ್ರಹಿಸುತ್ತವಂತೆ.

ಒಂದು ಸಣ್ಣ ವೈರಸ್ ಕಾಟದಿಂದ ದೇಶದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಬಹಳ ಬದಲಾಗಿವೆ. ಸರಕಾರದ ಬೊಕ್ಕಸಕ್ಕೆ ಈ ಮೊದಲು ಬರುತ್ತಿದ್ದಷ್ಟು ಆದಾಯ ಈಗ ಬರುತ್ತಿಲ್ಲ. ಆದ್ದರಿಂದಲೇ ತೈಲದ ಮೇಲೆ ಅಬಕಾರಿ ಸುಂಕವನ್ನು ಸರಕಾರಗಳು ತೈಲದ ಮೇಲೆ ವಿಧಿಸುತ್ತಿವೆ. ಅದೇನೇ ಇರಲಿ ತೈಲ ದರ ಏರಿಕೆಯಿಂದ ಜನಸಾಮಾನ್ಯರ ಬದುಕು ಮಾತ್ರ ಹೈರಾಣಾಗಿದೆ.

ಕೇಂದ್ರ ಸರಕಾರ ಇತ್ತೀಚಿನ ಬಜೆಟ್‌ನಲ್ಲಿ ಆಟೋಮೊಬೈಲ್ ಕ್ಷೇತ್ರಕ್ಕೆ ಸಂಬಂಧಿಸಿದ ಗುಜರಿ ನೀತಿಯೊಂದನ್ನು ಪ್ರಕಟಿಸಿದೆ. ಇದರ ಪ್ರಕಾರ ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಾಹನಗಳು 15 ವರ್ಷ ಹಳೆಯದಾಗಿದ್ದರೆ, ಹಾಗೂ ಸ್ವಂತ ವಾಹನಗಳು 20 ವರ್ಷ ಹಳೆಯದಾಗಿದ್ದರೆ ಆ ವಾಹನಗಳನ್ನು ಸಾರ್ವಜನಿಕರು ಗುಜರಿಗೆ ಹಾಕಬೇಕು, ದೇಶಾದ್ಯಂತ ಹೀಗೆ ಹಳೆಯ ವಾಹನಗಳ ಸಂಖ್ಯೆ 4 ಕೋಟಿಗಿಂತಲೂ ಅಧಿಕವಾಗಿದೆ. ಇಷ್ಟು ದೊಡ್ಡ ಪ್ರಮಾಣದ ಹಳೆಯ ವಾಹನಗಳಿಂದ ವಾತಾವರಣದಲ್ಲಿ ಅದೆಷ್ಟು ಮಾಲಿನ್ಯ ಉಂಟಾಗುತ್ತದೆ ಎಂಬುವುದನ್ನು ಹಾಗೆ ಸುಮ್ಮನೆ ಊಹಿಸಿಕೊಳ್ಳಿ.

ಹೀಗಾಗಿಯೇ ತೈಲದ ಮೇಲಿನ ಅವಲಂಬನೆ ಮತ್ತು ವಾತಾವರಣದಲ್ಲಿ ಉಂಟಾಗುತ್ತಿರುವ ಮಾಲಿನ್ಯವನ್ನು ಕಡಿತಗೊಳಿಸಲು ದೇಶಾದ್ಯಂತ ನೀತಿ ನಿರೂಪಕರು ಭವಿಷ್ಯವನ್ನು ಕಡಿಮೆ – ಇಂಗಾಲದ ದಿನಗಳನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ಶೂನ್ಯ ಮಾಲಿನ್ಯವನ್ನು ಹೊರ ಸೂಸುವ ವಾಹನಗಳನ್ನು ಉಪಯೋಗಿಸುವಂತೆ ದೇಶದ ಜನರಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಈಗ ದೇಶಾದ್ಯಂತ ಎಲೆಕ್ಟ್ರಿಕ್ ವಾಹನಗಳ ಯುಗ ಆರಂಭವಾಗಿದೆ ಎಂದರೆ ಖಂಡಿತವಾಗಿಯೂ ಅತಿಶಯೋಕ್ತಿ ಆಗಲಾರದು!

ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ಉತ್ತೇಜಿಸಲು 2013ರಲ್ಲಿ ರಾಷ್ಟ್ರೀಯ ಇ – ಮೊಬಿಲಿಟಿ ಮಿಷನ್‌ನನ್ನು ಸ್ಥಾಪನೆ ಮಾಡಲಾಯಿತು. ಈ ಮಿಷನ್ 2020ರವರೆಗೆ ಸುಮಾರು 7 ಮಿಲಿಯನ್ ವಾಹನಗಳನ್ನು ಉತ್ಪಾದಿಸಿ ಮಾರಾಟ ಮಾಡುವುದರ ಜತೆಗೆ ಶೇ.3ರಷ್ಟು ಕಾರ್ಬನ್ ಡೈ ಆಕ್ಸೈಡ್‌ನ್ನು ಕಡಿಮೆ ಮಾಡುವ ಗುರಿಯನ್ನು ಹಾಕಿಕೊಳ್ಳಲಾಯಿತು. ಅದೇ ವರ್ಷದಿಂದಲೇ ವಿದ್ಯುತ್ ಚಾಲಿತ ವಾಹನಗಳ ಉತ್ಪಾದನಾ ಉದ್ಯಮವನ್ನು ಪ್ರೋತ್ಸಾಹಿಸಲು ಕೇಂದ್ರ ಸರಕಾರ ಹಣಕಾಸಿನ ನೆರವನ್ನು ನೀಡಲು ಆರಂಭಿಸಿತು. ಸೊಸೈಟಿ ಆಫ್ ಮ್ಯಾನ್ಯುಫ್ಯಾಕ್ಚರ್ಸ್ ಆಫ್ ಎಲೆಕ್ಟ್ರಿಕ್ ವೆಹಿಕಲ್ಸ್ (ಎಸ್‌ಎಂಇವಿ) ಪ್ರಕಾರ 2020ರಲ್ಲಿ ವಿದ್ಯುತ್ ಚಾಲಿತ ವಾಹನಗಳ ಮಾರಾಟವು 1ಲಕ್ಷದ 56 ಸಾವಿರ ಯುನಿಟ್‌ಗಳಾಗಿದ್ದು, ಇದು ವರ್ಷದಿಂದ ವರ್ಷಕ್ಕೆ ಶೇ.20ರಷ್ಟು ಹೆಚ್ಚಾಗಿದೆ.

ವಿದ್ಯುತ್ ಚಾಲಿತ ವಾಹನಗಳಿಗೆ ಪ್ರಮುಖವಾಗಿ ಅವಶ್ಯಕತೆ ಇರುವುದು ಚಾರ್ಜಿಂಗ್ ಸ್ಟೇಷನ್‌ಗಳು. ಭಾರತದಲ್ಲಿ ಈಗ ಕೇವಲ 250 ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್‌ಗಳು ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಸರಕಾರ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಯಲ್ಲಿ ಪ್ರತಿ ಇಪ್ಪತ್ತೈದು ಕಿಲೋ ಮೀಟರ್‌ಗೊಂದು ಹಾಗೂ ನಗರಗಳಲ್ಲಿ ಪ್ರತಿ ಮೂರು ಕಿಲೋ ಮೀಟರ್‌ಗೊಂದು ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ ಮಾಡಲು ಯೋಜನೆ ಹಾಕಿಕೊಂಡಿದೆ. ಜಪಾನಿನ ಪ್ಯಾನಾಸಾನಿಕ್ ಎಲೆಕ್ಟ್ರಿಕ್ ಕಂಪನಿ 2025ರೊಳಗೆ ನಮ್ಮ ದೇಶದ 25 ಬೃಹತ್ ನಗರಗಳಲ್ಲಿ ಸುಮಾರು ಒಂದು ಲಕ್ಷ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ ಮಾಡಲು ಮುಂದಾಗಿದೆ.

ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ನಗರೀಕರಣದ ಪರಿಣಾಮದಿಂದ ಪ್ರತಿಯೊಂದು ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಸುಲಭದ ಮಾತಾಗಿ ಉಳಿದಿಲ್ಲ! ಪ್ರತಿಯೊಂದು ಯೋಜನೆಯ ಹಿಂದೆ ಗುಣಾತ್ಮಕ ಹಾಗೂ ಋಣಾತ್ಮಕ ಅಂಶಗಳು ಇದ್ದೇ ಇರುತ್ತವೆ. ಆದರೆ ಯಾವುದು ಒಳಿತನ್ನು ಉಂಟು ಮಾಡುತ್ತದೆಯೋ ಅದನ್ನು ಅಳವಡಿಸಿಕೊಂಡರೆ ಒಳ್ಳೆಯದು.

ಎಲೆಕ್ಟ್ರಾನಿಕ್ ವಾಹನಗಳನ್ನು ಸಮರ್ಕವಾಗಿ ಜಾರಿಗೆ ಮಾಡಲು ಒಟ್ಟಾರೆ ಎರಡು ಆಧಾರ ಸ್ತಂಭಗಳ ಅವಶ್ಯಕತೆಯಿದೆ. ಮೊದಲನೆ ಯದ್ದು ಸರಿಯಾದ ನಗರ ಯೋಜನೆ, ಎರಡನೆಯದ್ದು ಸಮರ್ಪಕವಾದ ವಿದ್ಯುತ್ ಕ್ಷೇತ್ರ. ಭಾರತ ವಿದ್ಯುತ್ ಚಾಲಿತ ವಾಹನಗಳ ಉತ್ಪಾದನಾ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಲು 2030ರೊಳಗೆ ಸುಮಾರು 12 ಲಕ್ಷದ 50 ಸಾವಿರ ಕೋಟಿ ಹಣವನ್ನು ಹೂಡಿಕೆ ಮಾಡುವ ಅವಶ್ಯಕತೆ ಇದೆ. ಇವೆಲ್ಲವೂ ಸರಿಯಾದ ಸಮಯದಲ್ಲಿ ಕಾರ್ಯರೂಪಕ್ಕೆ ಬಂದಾಗ ಮಾತ್ರ ಕೈಗೆಟುಕುವ ದರದಲ್ಲಿ, ಉತ್ತಮ ಗುಣಮಟ್ಟದ ವಾಹನಗಳನ್ನು ಜನರು ಬಳಕೆ ಮಾಡಲು ಅನುಕೂಲವಾಗುತ್ತದೆ.

ಶ್ರೀಪ್ರಭು ಪಾದರು ಹೇಳಿದ ಮಾತಿನ ವಾಸ್ತವಿಕತೆ ಇಂದು ಅರಿವಿಗೆ ಬರುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆ, ವಾಹನಗಳ ಸಂಖ್ಯೆ, ದಿನದಿಂದ ದಿನಕ್ಕೆ ಏರಿಕೆ ಯಾಗುತ್ತಿರುವ ತೈಲ ದರ, ವಾಹನಗಳ ಮಾಲಿನ್ಯದ ಪ್ರಮಾಣ ಎಲ್ಲವೂ ಗಾಬರಿಗೊಳಿಸುವಂಥದ್ದೆ. ಈ ಸಮಸ್ಯೆಗಳ ನಡುವೆಯೇ ನಮಗೊಂದು ಜವಾಬ್ದಾರಿಯೂ ಇದೆ ಎಂಬುವುದನ್ನು ನಾವು ಎಂದಿಗೂ ಮರೆಯಬಾರದು.

ನಮ್ಮ ಪೂರ್ವಜರು ನೆಟ್ಟಿರುವ ಗಿಡದಲ್ಲಿ ಇಂದು ನಾವು ನೆರಳನ್ನು ಪಡೆಯುತ್ತಿದ್ದೇವೆ! ಆ ನೆರಳು ಮುಂದಿನ ಪೀಳಿಗೆಗೆ ಬೇಕಲ್ಲವೇ? ಹಾಗಾಗಿ ಗಿಡ ನೆಡುವುದೆಂದರೆ ಇಲ್ಲಿ ಕೇವಲ ಗಿಡವನ್ನು ನೆಟ್ಟು ಫೋಟೋ ತೆಗೆಸಿಕೊಳ್ಳುವುದಲ್ಲ! ಬದಲಾಗಿ ನಮಗೆ ಬಳುವಳಿಯಾಗಿ ಬಂದಿರುವ ಸ್ವಚ್ಛವಾದ ವಾತಾವರಣ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗೆ ಲಭಿಸುವಂತೆ ಮಾಡುವುದು. ಆ ಮಹಾನ್ ಕಾರ್ಯಕ್ಕೆ ವಿದ್ಯುತ್ ಚಾಲಿತ ವಾಹನಗಳ ಬಳಕೆಯೂ ಒಂದು ಮೈಲಿಗಲ್ಲು.